**ದಿನಾಂಕಃ 20–07–2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದಃ**

7. ದಿನಾಂಕ 16.09.2013 ರಂದು ಈ ಪ್ರಕರಣದಲ್ಲಿ ಪಿರ್ಯಾದನ್ನು ಕೊಟ್ಟಿದ್ದಾರೆ. ಮುಖ್ಯ ವಿಚಾರಣೆಯಲಿ ಸಾಕ್ಷ್ಯ ನೀಡುವಾಗ ನಾನು ತಿಳಿದುಕೊಂಡು ಸಾಕ್ಷ್ಯ ನೀಡಿದ್ದೇನೆ. ಪಿರ್ಯಾದುದಾರ ರೂ 1000 ರ 2 ನೋಟು ಮತ್ತು ರೂ500 ರ 2 ನೋಟನ್ನು ಯಾರ ಮುಂದೆ ಹಾಜರುಪಡಿಸಿದ ಎಂದರೆ ಆರಕ್ಷಕ ಉಪಾಧೀಕ್ಷಕರ ಮುಂದೆ ಹಾಜರುಪಡಿಸಿದ. ನಮ್ಮ ಕಚೇರಿಗೆ ಯಾವುದೇ ದಾಖ್ಲಾತಿಗಳು ಅಥವಾ ವಸ್ತುಗಳನ್ನು ತಂದು ಕೊಟ್ಟರೆ ಅವುಗಳನ್ನು ಸ್ವೀಕರಿಸಿದ ಬಗ್ಗೆ ಕಚೇರಿಯ ಸಂಬಂಧಿಸಿದ ಪುಸ್ತಕದಲ್ಲಿ ನಮೂದಿಸುತ್ತೇವೆ ಎಂದರೆ ಹೌದು. ಮೇಲ್ಕಂಡ ನೋಟುಗಳನ್ನು ಹಾಜರುಪಡಿಸಿದ ಬಗ್ಗೆ ಬೇರೆ ಪುಸ್ತಕದಲ್ಲಿ ಬರೆದಿಲ್ಲ. ಪಿರ್ಯಾದುದಾರ ನೋಟುಗಳನ್ನು ಹಾಜರುಪಡಿಸಿದ ಎಂಬ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಪ್ರಾಯೋಗಿಕ ಪಂಚನಾಮೆಯಲ್ಲಿ ಅದನ್ನು ನಮೂದಿಸಲಾಗಿದೆ. ಪಿರ್ಯಾದುದಾರ ಯಾವುದೇ ನೋಟುಗಳನ್ನು ತಂದು ಹಾಜರುಪಡಿಸಿಲ್ಲ ಎಂದರೆಸರಿಯಲ್ಲ. ಆ ನೋಟುಗಳಿಗೆ ಪಿನಾಪ್ತಲಿನ ಪುಡಿಯನ್ನು ಲೇಪಿಸಲಾಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಫಿನಾಪ್ತಲಿನ್ ಪುಡಿ ಮತ್ತು ಸೋಡಿಯಮ್ ಕಾರ್ಬೋನೇಟ್ ಪುಡಿಯನ್ನು ಇಲಾಖೆಯಿಂದ ಪೂರೈಸುತ್ತಾರಾ ಅಥವಾ ಕಚೇರಿಯಿಂದ ಖರೀದಿ ಮಾಡುತ್ತಾರಾ ಎಂದರೆ ಅದು ತನಿಖಾಧಿಕಾರಿಯವರಿಗೆ ತಿಳಿದ ವಿಚಾರ ಆಗಿದೆ. ಫಿನಾಪ್ತಲಿನ್ ಪುಡಿಯನ್ನು ನೋಟುಗಳಿಗೆ ಲೇಪನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು 8 ರಿಂದ 10 ಲೋಕಾಯುಕ್ತ ಪ್ರಕರಣಗಳಲ್ಲಿ ಸಾಕ್ಷ್ಯ ನೀಡಿದ್ದೇನೆ. ನನ್ನ ಸಮಕ್ಷಮ ಯಾವುದೇ ಪ್ರಾಯೋಗಿಕ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ರಾಸಾಯನಿಕ ಪ್ರಕ್ರಿಯೇಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪಂಚ–1 ರವರ ಕೈ ಬೆರಳುಗಳನ್ನು ಯಾವುದೇ ದ್ರಾವಣದಲ್ಲಿ ಅದ್ದಿಲ್ಲ ಮತ್ತು ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿಲ್ಲ ಎಂದರೆ ಸರಿಯಲ್ಲ.

8. ಕುಮಟಾಗೆ ನಾವು ಸಂಜೆ 6.00 ಗಂಟೆಗೆ ತಲುಪಿದೆವು. ನಾವು ಕುಮಟಾದಲ್ಲಿ ಗಿಬ್ಸ ಸರ್ಕಲ್ ನಲ್ಲಿ ಇಳಿದುಕೊಂಡೆವು. ನೋಟುಗಳನ್ನು ಪಂಚ–1 ಪಿರ್ಯಾದಿಯ ಜೇಬಿನಲ್ಲಿ ಇಟ್ಟ ಮೇಲೆ ಪಂಚ–1 ರವರ ಕೈಗಳನ್ನು ತೊಳೆದರಾ ಎಂದರೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿಯೇ ಅವರು ಕೈಗಳನ್ನು ತೊಳೆದುಕೊಂಡಿರುತ್ತಾರೆ. ಪಂಚ–1 ರವರ ಕೈಗಳನ್ನು ಎಷ್ಟು ಬಾರಿ ತೊಳೆದರು ಎಂದು ನನಗೆ ನೆನಪಿಲ್ಲ. ಪಿರ್ಯಾದಿಯ ಕಿಸೆಯಲ್ಲಿ ನೋಟುಗಳನ್ನು ಇಟ್ಟ ನಂತರ ಪಂಚ–1 ರವರು ಕೈಗಳನ್ನು ತೊಳೆದುಕೊಂಡರು. ಆ ರೀತಿ ಪ್ರಾಯೋಗಿಕ

ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದು ನನಗೆ ಗೋತ್ತಿಲ್ಲ. ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಯಾವುದೇ ಪ್ರಾಯೋಗಿಕ ಪಂಚನಾಮೆ ಮಾಡಿಲ್ಲ ಮತ್ತು ಯಾರೂ ಕೈಗಳನ್ನು ತೊಳೆದುಕೊಂಡಿಲ್ಲ ಎಂದರೆ ಸರಿಯಲ್ಲ.

9. ಕುಮಟಾದಲ್ಲಿ ಗಿಬ್ಸ ವೃತ್ತದಿಂದ ಆರೋಪಿ ಕಚೇರಿಗೆ ಕಾಲ್ನಡೆಯಲ್ಲಿ 10 ರಿಂದ 15 ನಿಮಿಷಗಳಲ್ಲಿ ತಲುಪವಷ್ಟು ದೂರದಲ್ಲಿದೆ. ನಾವು ನಡೆದುಕೊಂಡು ಅಲ್ಲಿಂದ ಆರೋಪಿ ಕಚೇರಿಗೆ ಹೋದೆವು. ಆರೋಪಿಯ ಕಚೇರಿಯಲ್ಲಿ ಇದ್ದ ಇತರೆ ಸಿಬ್ಬಂದಿಯನ್ನು ನಾನು ನೋಡಲಿಲ್ಲ ಕಾರಣ ನಾನು ಕಚೇರಿಯಿಂದ ಹೊರಗಡೆ A−1 ಜೆರಾಕ್ಸ ಸೆಂಟರ್ ಬಳಿ ದಾಳಿಗೆ ಮೊದಲು ನಿಂತಿದ್ದೆ. ಆರೋಪಿಯ ಕಚೇರಿಗೆ ಎದುರುಗಡೆ ಅಂಗಡಿಗಳು ಇವೆಯಾ ಎಂದರೆ ನೆನಪಿಲ್ಲ. ಪಿರ್ಯಾದಿ ತೋರಿಸಿದ ಕರವಸ್ತ್ರವನ್ನು ಜಪ್ತು ಮಾಡಿರುವುದಿಲ್ಲ. ಪಿರ್ಯಾದುದಾರ ಆರೋಪಿಯ ಕಚೇರಿಗೆ ಹೊರಾಂಗಣದಲ್ಲಿ ಹೋದ ಮೇಲೆ ಆರೋಪಿ ಅಲ್ಲಿಂದ ಬೈಕ ಹತ್ತಿ ಹೋಗುವ ತನಕ ಪಿರ್ಯಾದುದಾರ ಸುಮಾರು 3 ರಿಂದ 5 ನಿಮಿಷ ಅಲ್ಲಿ ಇದ್ದ. ಆರೋಪಿ ಬೈಕ್ ನಲ್ಲಿ ಕಚೇರಿಯಿಂದ ಹೊರಟಾಗ ಅಂದಾಜು ಸಂಜೆ 6.35 ರಿಂದ 6.40 ಆಗಿತ್ತು. A−1 ಜೆರಾಕ್ಸ ಸೆಂಟರ್ ನಿಂದ ಆರೋಪಿಯ ಕಚೇರಿಯ ಸೈಕಲ್ ಸ್ಟ್ಯಾಂಡ್ ಗೆ 60 ಅಡಿ ಅಂತರ ಇತ್ತು. ಆರೋಪಿ ಬೈಕು ಹತ್ತಿ ಹೋದಾಗ ಪಿರ್ಯಾದುದಾರ ಆರೋಪಿ ತಪ್ಪಿಸುಕೊಂಡು ಹೋಗುತ್ತಿದ್ದಾನೆಂದು ಕೂಗಿದನಾ ಎಂದರೆ ಕೂಗಿರಬಹುದು. ತಕ್ಷಣವೇ ಆರೋಪಿಯನ್ನು ಅಡ್ಡಹಾಕಲು ಅವಕಾಶ ಇರಲಿಲ್ಲ. ಅಡ್ಡ ಹಾಕಲು ಪ್ರಯತ್ನ ಪಟ್ಟೆವಾ ಎಂದರೆ ಅಷ್ಟರಲ್ಲಿ ಆರೋಪಿ ಓಡಿ ಹೋಗಿದ್ದ. ಆರೋಪಿಯನ್ನು ನಾವು ಕುಮಟಾ ಪಟ್ಟಣದಲ್ಲಿ ಎಲ್ಲಾ ಕಡೆ ಹುಡುಕಾಡಿದೆವು. ಯಾವ ಯಾವ ರಸ್ತೆಯಲ್ಲಿ ಹುಡುಕಾಡಿದೆವು ಎಂದು ನೆನಪಿಲ್ಲ. ಯಾವ ಯಾವ ರಸ್ತೆಯಲ್ಲಿ ಹುಡುಕಾಡಿದೆವು ಎಂದು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿಲ್ಲ. ಆರೋಪಿಯನ್ನು ಹಿಡಿಯುವ ತನಕ ನಾವು ಹಿಂಬಾಲಿಸುತ್ತಲೇ ಇದ್ದೇವು. ಆರೋಪಿ ಸಂಜೆ 6.35 ರಿಂದ ಸುಮಾರು 2 ರಿಂದ 2.15 ಗಂಟೆ ಅವಧಿ ಬೈಕ್ ನಲ್ಲಿ ಸುತ್ತಾಡಿರುತ್ತಾನೆ. ಆರೋಪಿ ಹೋದ ಕಡೆ ಎಲ್ಲಾ ಹಿಂಬಾಲಿಸಲು ಆಗಲಿಲ್ಲ ಕೆಲವು ಕಡೆ ಅವನು ಕಾಣಿಸಿದಾಗ ಹಿಂಬಾಲಿಸಿದೆವು. ನಾವು ಪೊಲೀಸ ಜೀಪ್ ನಲ್ಲಿ ಆರೋಪಿಯನ್ನು ಹಿಂಬಾಲಿಸಿದೆವು. ಆರೋಪಿಗೆ ಅತ್ಯಂತ ಸಮೀಪದಲ್ಲಿ ನಾವು ಬಂದಿದ್ದು ಯಾವ ಎಂದರೆ ಶಾಂತಿಕ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಅದಕ್ಕೆ ಮೊದಲು ಎಲ್ಲಿ ಆರೋಪಿಗೆ ಸಮೀಪ ಬಂದಿದ್ದೇವು ಎಂದು ನೆನಪಿಲ್ಲ. ಆರೋಪಿಗೆ ನಿಲ್ಲು ತಪ್ಪಿಸಿಕೊಳ್ಳಬೇಡ ಎಂದು ಹಿಂಬಾಲಿಸುವಾಗ ಎಲ್ಲಿಯೂ ನಾವು ಹೇಳಿಲ್ಲ ಕಾರಣ ಆರೋಪಿ ಬಹಳ ದೂರದಲ್ಲಿ

ಇದ್ದ. ಕುಮಟಾ ಪಟ್ಟಣದಲ್ಲಿ ಅನೇಕ ಕಡೆ ಸಿಸಿಟಿವಿ ಅಳವಡಿಸಿದ್ದಾರೆ ಎಂದರೆ ನನಗೆ ಅದು ಗೊತ್ತಿಲ್ಲ. ಶಾಂತಿಕ ಪರಮೇಶ್ವರಿ ದೇವಸ್ಥಾನದ ಬಳಿ ಆರೋಪಿಯನ್ನು ಹಿಡಿದಾಗ ಕತ್ತಲೆಯಾಗಿತ್ತು. ಅಲ್ಲಿ ಪಂಚ–1 ರವರ ಕೈಗಳನ್ನು ದ್ರಾವಣದಲ್ಲಿ ಅದ್ದಿಸಲಿಲ್ಲ. ಆ ಸ್ಥಳದಲ್ಲಿ ಆರೋಪಿಯ ಕೈಗಳನ್ನು ದ್ರಾವಣದಲ್ಲಿ ಅದ್ದಿಸಿಲ್ಲ. ಆರೋಪಿಯನ್ನು ಅಲ್ಲಿ ಹಿಡಿದ ಮೇಲೆ ಅವನನ್ನು ನಮ್ಮ ಪೊಲೀಸ ವಾಹನದಲ್ಲಿ ಕರೆದುಕೊಂಡು ಹೋದೆವು. ಪಂಚ–1 ಮತ್ತು ಆರೋಪಿ ಒಂದೇ ವಾಹನದಲ್ಲಿ ಆಗ ಇದ್ದರಾ ಎಂದರೆ ನಾನು ಅಲ್ಲಿ ಸ್ಥಳದಿಂದ ಆರೋಪಿಯ ಬೈಕ್ ನ್ನು ತೆಗೆದುಕೊಂಡು ಬರುತ್ತಿದ್ದೆ ಆದ್ದರಿಂದ ನನಗೆ ಪಂಚ–1 ಮತ್ತು ಆರೋಪಿ ಒಂದೇ ವಾಹನದಲ್ಲಿ ಇದ್ದರಾ ಎಂದು ನನಗೆ ಗೊತ್ತಿಲ್ಲ. ಪಂಚ–1 ರವರ ಕೈಗಳನ್ನು ಶಾಂತಿಕ ಪರಮೇಶ್ವರಿ ದೇವಸ್ಥಾನದಲ್ಲಿ ಸೋಪಿನಿಂದ ತೊಳೆಸಿರುವುದಿಲ್ಲ. ಸೋಡಿಯಮ್ ಕಾರ್ಬೋನೇಟ್ ಪುಡಿ ಹಾಗೂ ಫಿನಾಪ್ತಲಿನ್ ಪುಡಿ ಬಹಳ ಸೂಕ್ಷ್ಮವಾದ ರಾಸಾಯನಿಕ ಪದಾರ್ಥಗಳು ಎಂದರೆ ಇರಬಹುದು. ಒಬ್ಬರ ಕೈಗೆ ಅಂಟಿರುವ ಫಿನಾಪ್ತಲಿನ್ ಪುಡಿ ಆಕಸ್ಮಿಕವಾಗಿ ಇನ್ನೊಬ್ಬನ ಕೈಗೆ ತಾಗಿದರೆ ಆಗಲೂ ಮುಂದೆ ಏನು ಪರಿಣಾಮ ಆಗಬಹುದೋ ಅದು ಆಗುತ್ತದೆ ಎಂದರೆ ಇರಬಹುದು. ಶಾಂತಿಕ ಪರಮೇಶ್ವರಿ ದೇವಸ್ಥಾನದ ಬಳಿ 10 ರಿಂದ 15 ನಿಮಿಷ ಇದ್ದೆವು. ಅಲ್ಲಿ ಸುತ್ತಮುತ್ತಲೂ ಮನೆಗಳು ಇರಲಿಲ್ಲ. ಅಲ್ಲಿ ಜನ ಯಾರೂ ಕೂಡಿರಲಿಲ್ಲ. ಆರೋಪಿ ಅವನ ಕಿಸೆಯಿಂದ ಹಣ ತೆಗೆದು ಗಿಡಗಂಟೆಗಳಲ್ಲಿ ಬಿಸಾಡಿದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿ ಆ ಹಣವನ್ನು ವಶಪಡಿಸಿಕೊಂಡರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

10. ಪಿರ್ಯಾದಿ ಸನ್ನೆ ನೀಡುವುದನ್ನು ಆರೋಪಿ ನೋಡಿದ್ದಾನೆ ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಖರವಾಗಿ ಹೇಳಿರುತ್ತೇನೆ. ನಾನು ತನಿಖಾಧಿಕಾರಿ ಮುಂದೆ ಕೊಟ್ಟ ಹೇಳಿಕೆಯಲ್ಲಿ ಪಿರ್ಯಾದುದಾರ ಸನ್ನೆ ಮಾಡಿದ್ದನ್ನು ಆರೋಪಿ ನೋಡಿದ್ದಾನೆಂದು ಹೇಳಿರುವುದಿಲ್ಲ. ಆ ರೀತಿ ನ್ಯಾಯಾಲಯದ ಮುಂದೆ ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಹೌದು. ಆ ವಿಚಾರವನ್ನು ತನಿಖಾಧಿಕಾರಿ ಮುಂದೆ ಹೇಳಲು ನನಗೆ ತೊಂದರೆ ಇರಲಿಲ್ಲ. ಶಾಂತಿಕ ಪರಮೇಶ್ವರಿ ದೇವಸ್ಥಾನದ ಬಳಿ ಕತ್ತಲೆ ಇತ್ತು ಎಂದು ನಾನು ಹೇಳುತ್ತಿದ್ದು ಅಲ್ಲಿ ಏನೇನು ಘಟನೆ ಜರುಗಿತ್ತು ಎಂದು ನಿಖರವಾಗಿ ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತೇನೆ. ನಾವು ಕುಮಟಾ ಪ್ರವಾಸಿ ಮಂದಿರ ತಲುಪಿದಾಗ ರಾತ್ರಿ 9.00 ಗಂಟೆಯಾಗಿರಬಹುದು. ಪ್ರವಾಸಿ ಮಂದಿರದಲ್ಲಿ ಅಲ್ಲಿನ ಮೇಟಿ ಇದ್ದ ಆತನ ಹೆಸರು ನನಗೆ ಗೊತ್ತಿಲ್ಲ. ಟ್ರ್ಯಾಪ್ ಪಂಚನಾಮೆಗೆ ಆ ಮೇಟಿ ಸಹಿ ಮಾಡಿಲ್ಲ. ಅಲ್ಲಿ ಪ್ರವಾಸಿ ಮಂದಿರಕ್ಕೆ

ಹೋದಾಗ ಅದನ್ನು ಬಳಸಿದಾಗ ಅಲ್ಲಿ ವಹಿಯಲ್ಲಿ ನಮೂದು ಮಾಡಬೇಕಾಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರವಾಸಿ ಮಂದಿರಕ್ಕೆ ನಾವು ಹೋಗಿದ್ದೇವೆ ಎಂದು ನನ್ನ ಬಾಯಿ ಮಾತಿನ ಹೇಳಿಕೆ ಬಿಟ್ಟರೆ ಬೇರೆ ದಾಖಲಾತಿ ಇಲ್ಲ ಎಂದರೆ ಅಲ್ಲಿ ಟ್ರ್ಯಾಪ್ ಪಂಚನಾಮೆ ಮಾಡಿದ್ದು ಇರುತ್ತದೆ. ಪ್ರವಾಸಿ ಮಂದಿರದ ದಾಖಲಾತಿಯನ್ನು ನನ್ನ ಸಮಕ್ಷಮ ಪಡೆದಿರುವುದಿಲ್ಲ. ಪ್ರವಾಸಿ ಮಂದಿರಕ್ಕೆ ನಾನು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದಲ್ಲಿ ರಾಸಾಯನಿಕ ಪ್ರಯೋಗ ಮಾಡಿದರು ಹಾಗೂ ಆರೋಪಿಯ ಕೈ ತೊಳೆದ ಧ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೇ ಬೇರೆ ಪ್ಯಾಂಟ್ ನ್ನು ತರಿಸಿ ಕೊಟ್ಟೇವು ಮತ್ತು ಅವನು ಧರಿಸಿದ್ದ ಪ್ಯಾಂಟಿನ ಜೇಬನ್ನು ಧ್ರಾವಣದಲ್ಲಿ ತೊಳೆದಾಗ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರವಾರದಿಂದ ಹೊರಟಾಗ ಏನೇನು ಪರಿಕರಗಳನ್ನು ತೆಗೆದುಕೊಂಡು ಹೋದೆವು ಎಂದು ಪಟ್ಟಿಯನ್ನು ಬರೆದುಕೊಂಡಿಲ್ಲ. ಆದರೆ ಟ್ರ್ಯಾಪ್ ಗೆ ಬೇಕಾದ ಪರಿಕರಗಳನ್ನು ತೆಗೆದುಕೊಂಡು ಹೋಗಿದ್ದೆವು. ಪಿರ್ಯಾದುದಾರ ಅವನಿಗೆ ಕೊಟ್ಟ ವಾಯ್ಸ್ ರೆಕಾರ್ಡರ್ ನ್ನು ಕುಮಟಾದ ಗಿಬ್ಸ ವೃತ್ತದ ಬಳಿ ಚಾಲು ಮಾಡಿ ಇಟ್ಟುಕೊಂಡ. ಅದನ್ನು ಎಲ್ಲಿ ಬಂದ್ ಮಾಡಿದ ಎಂದು ಮಾಹಿತಿ ಇಲ್ಲ. ಅವನಿಗೆ ಕೊಟ್ಟ ಡಿಜಿಟಲ್ ವಾಯ್ಸ್ ರೆಕಾರ್ಡರ್ ರ ಬಗ್ಗೆ ನನಗೆ ಮಾಹಿತಿ ಇದೆ. ಅದನು ಪಿರ್ಯಾದುದಾರನಿಗೆ ಕೊಟ್ಟಾಗ ಅದು ಸುಸ್ಥಿತಿಯಲ್ಲಿ ಇತ್ತಾ ಎಂದು ತನಿಖಾಧಿಕಾರಿ ಪರಿಶೀಲನೆ ಮಾಡಿರುತ್ತಾರೆ. ಅದರಲ್ಲಿ ಅಸ್ಪಷ್ಟವಾಗಿದ್ದ ಧ್ವನಿ ಪೈಕಿ ಕೇಳುತ್ತಿದ್ದ ಧ್ವನಿಯನ್ನು ಬರೆದುಕೊಂಡಿದ್ದಾರಾ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ನಾನು ಅದರಲ್ಲಿದ್ದ ಧ್ವನಿಯನ್ನು ಆಲಿಸಿರುವುದಿಲ್ಲ. ಅಭಿಯೋಜನೆಗೆ ವಿರುದ್ಧವಾದ ಧ್ವನಿಗಳು ಅದರಲ್ಲಿ ಇದ್ದ ಕಾರಣ ಆ ಧ್ವನಿ ಕೇಳಿಸುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಪ್ರವಾಸಿ ಮಂದಿರದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ನೋಟುಗಳನ್ನು ಆರೋಪಿಯ ತಾಬೆಯಿಂದ ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಾಬೆಯಿಂದ ಆ ನೋಟುಗಳು ಜಪ್ತು ಆಗಿವೆ ಎಂದು ನಾನು ಹೇಳಿಕೆಯಲ್ಲಿ ಹೇಳಿದ್ದೇನೆ. ಗುನ್ಹಾ ಸ್ಥಳದ ಯಾವುದೇ ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

11. ಆವಕ ಜಾವಕ ವಹಿಯನ್ನು ಆರೋಪಿಯ ಕಚೇರಿಯಲ್ಲಿ ರಾತ್ರಿ 1.00 ಗಂಟೆ ನಂತರ ಪರಿಶೀಲಿಸಲಾಗಿರುತ್ತದೆ. ಆ ಸಮಯದಲ್ಲಿ ಆರೋಪಿ ಕಚೇರಿಯಲ್ಲಿ ಆರೋಪಿ ಕಚೇರಿಯ

ಅಧಿಕಾರಿಗಳು ಇದ್ದರು. ಆವಕ ಜಾವಕ ವಹಿಯನ್ನು ತೋರಿಸಿದ ಅಧಿಕಾರಿಯನ್ನು ನಾನು ನೋಡಿರುವುದಿಲ್ಲ. ಆದರೆ ಆಗ ನಾನು ಆರೋಪಿ ಕಚೇರಿಗೆ ಹೋಗಿದ್ದೆ. ಟ್ರ್ಯಾಪ್ ಪಂಚನಾಮೆಗೆ ಸದರಿ ಅಧಿಕಾರಿಯ ರುಜುವನ್ನು ಪಡೆದಿಲ್ಲ. ಆವಕ ಜಾವಕ ವಹಿಯಲ್ಲಿ ಪಿರ್ಯಾದಿಯ ಯಾವುದೇ ಕಾಗದ ಪತ್ರಗಳು ನಮೂದು ಆಗಿಲ್ಲ ಎಂದರೆ ಹೌದು. ಆವಕ ಜಾವಕ ವಹಿಯಲ್ಲಿ ಆರೋಪಿ ಕೊನೆಯ ಬಾರಿಗೆ ಯಾವಾಗ ನಮೂದು ಮಾಡಿದ್ದ ಎಂದು ನಾನು ನೋಡಿಲ್ಲ. ಆರೋಪಿಯ ಕಚೇರಿಯಲ್ಲಿ ಆವಕ ಜಾವಕ ವಹಿ ಪರಿಶೀಲನೆ ಮಾಡಿದ ಬಗ್ಗೆ ಪ್ರತ್ಯೇಕ ಪಂಚನಾಮೆ ಮಾಡಿಲ್ಲ. ಆರೋಪಿ ಕಚೇರಿಗೆ ನಾನು ಆಗ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಕಚೇರಿಗೆ ರಾತ್ರಿ ಹೋದಾಗ ಆ ಕಚೇರಿಯ ಅಧಿಕಾರಿಗಳು ಅಲ್ಲಿ ಕಾಯುತ್ತಿದ್ದರಾ ಅಥವಾ ಅವರು ನಂತರ ಬಂದರಾ ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯಲಿ ಹೇಳಿರುವ ಛಾಯಾಚಿತ್ರಗಳನ್ನು ಅಲ್ಲಿ ಹೇಳಿರುವ ಸ್ಥಳಗಳಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಆವಕ ಜಾವಕ ವಹಿಯಲ್ಲಿ ನಾನು ಆರೋಪಿಯ ಸಹಿಯನ್ನು ಪರಿಶೀಲನೆ ಮಾಡಿಲ್ಲ. ಅದರಲ್ಲಿ ಆರೋಪಿಯ ರುಜು ಇರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಕುಮಟಾಗೆ ನಾನು ನಮ್ಮ ಅಧಿಕಾರಿಗಳ ಜೊತೆ ಹೋಗಿಲ್ಲ ಮತ್ತು ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಣ ಸ್ವೀಕರಿಸಿಲ್ಲ ಮತ್ತು ಬಿಸಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ